

**◆ ನೀವು ಮಹಿಳಾ ಸಾಹಿತ್ಯ ಚರಿತ್ರೆಯ ಸಂಪುಟದಲ್ಲಿ ಕೆಲಸ ಮಾಡಿದ್ದೀರಿ. ಆ ಸಂದರ್ಭದ ಬಗ್ಗೆ ಹೇಳಬಹುದೆ?**

ಎಚ್.ಎಸ್. ಶ್ರೀಮತಿಯವರು ನನಗೆ ಬಹಳ ಹಿಂದೆಯೆ ಹೇಳಿದ್ದರು, 'ಮಹಿಳಾ ಸಾಹಿತ್ಯ ಚರಿತ್ರೆ'ಯನ್ನು ಸಂಪಾದಿಸಬೇಕಿದೆ, ನೀವು ನನ್ನ ಜೊತೆಗಿರಬೇಕೆಂದು. ಅದರಂತೆ ಅವರು ಈ ಕೆಲಸವನ್ನು ಶುರು ಮಾಡಿದಾಗ ನನಗೆ ಅವಕಾಶಕೊಟ್ಟರು. ಎಚ್.ಎಸ್. ಶ್ರೀಮತಿಯವರ ಪ್ರಧಾನ ಸಂಪಾದಕತ್ವದಲ್ಲಿ ಶಾಂತಾ ಇಮ್ರಾಪುರ, ಮಂಜುಳಾ ಪ್ರಿಯದರ್ಶಿನಿ, ಎಲ್.ಜಿ. ಮೀರಾ, ಸಬೀಹಾಭೂಮಿಗೌಡ, ಶೈಲಜಾ ಹಿರೇಮಠ, ಸಂಧ್ಯಾರೆಡ್ಡಿ ಮತ್ತು ನನ್ನನ್ನು ಒಳಗೊಂಡು ಏಳುಜನ ಲೇಖಕಿಯರು ಮಹಿಳಾ ಸಾಹಿತ್ಯ ಚರಿತ್ರೆ ಕಟ್ಟಿದ್ದೆವು. ಕಾಲಾನುಕ್ರಮವಾಗಿ ಆ ಕೆಲಸವನ್ನು ನಮ್ಮೆಲ್ಲರಿಗೂ ವಹಿಸಿಕೊಟ್ಟರು. ನನಗೆ ಹದಿನೈದನೇ ಶತಮಾನದಿಂದ ಹದಿನೆಂಟನೇ ಶತಮಾನದವರೆಗೆ ಮಹಿಳಾ ಕವಯಿತ್ರಿಯರನ್ನು, ಅವರ ಕೃತಿಗಳನ್ನು ಕುರಿತು ಬರೆಯುವ ಜವಾಬ್ದಾರಿ ವಹಿಸಿದ್ದರು. ಸಂಚಿ ಹೊನ್ನಮ್ಮ, ಶೃಂಗಾರಮ್ಮ, ಚೆಲುವಾಂಬೆ, ಹೆಳವನಕಟ್ಟೆ ಗಿರಿಯಮ್ಮ ಮುಂತಾದವರೆಲ್ಲ ಬರುತ್ತಾರೆ. ಕನ್ನಡ ವಿಶ್ವವಿದ್ಯಾಲಯವು ಅದನ್ನು ಪ್ರಕಟಿಸಿತು. ಅದೊಂದು ಸುಂದರ ಅನುಭವ ಮತ್ತು ಉತ್ತಮ ಕಾರ್ಯವೂ ಆಗಿತ್ತು.

**◆ ಒಂದು ಸೃಜನಶೀಲ ಕೃತಿಯನ್ನು ಬರೆಯುವಷ್ಟೇ ಮುಖ್ಯವಾದದ್ದು ಗ್ರಂಥ ಸಂಪಾದನೆ. ಎಂದಾದರೂ ಸೃಜನಶೀಲ ಕೃತಿಗಳನ್ನು ಬರೆದಿದ್ದರೆ ಚೆನ್ನಾಗಿರುತ್ತಿತ್ತು ಎಂದು ಅನ್ನಿಸಿದೆಯ?**

ಸೃಜನಶೀಲ ಮತ್ತು ಸೃಜನೇತರ ಎಂದು ವರ್ಗೀಕರಣ ಮಾಡುವುದುಂಟು. ಇವೆರಡರ ನಡುವೆ ಹೆಚ್ಚು ಅಂತರವಿದೆ ಎಂದೆನಿಸುವುದಿಲ್ಲ. ಕುವೆಂಪು ಅವರನ್ನು ಸೃಜನಶೀಲ ಸಾಹಿತ್ಯದ ಮೇರು